# ಆಡ ಹೋಗೋಣ ಬಾರೋ ರಂಗ

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page no.: 44
2. **Note:** Singer has followed these lyrics.

ರಾಗ: ಬೇಹಾಗ್ ತಾಳ: ರೂಪಕ

ಆಡ ಹೋಗೋಣ ಬಾರೋ ರಂಗ
ಓಡಿ ಹೋಗಲು ಬೇಡೋ ಕೃಷ್ಣ || ಪ ||

ಅಣ್ಣೆ ಕಲ್ಲು ಗೋಲಿ ಗಜುಗ
ಚಿಣ್ಣಿಕೋಲು ಚೆಂಡು ಬುಗುರಿ
ಕಣ್ಣುಮುಚ್ಚಾಲೆ ಹಲವು ಕೂಟ
ಬಣ್ಣದಾಟಗಳನೆಲ್ಲ || 1 ||

ಸೋಲು ಗೆಲುವಿಗೆಲ್ಲ ನೀನು
ಬಾಲಕರೊಳು ಕೂಡಿಕೊಂಡು
ಮೇಲೆ ಮಮತೆಯಿಂದ ಸಾನು-
ಕೂಲವಾಗಿ ನಡಸುವಂತೆ || 2 ||

ಪುಟ್ಟ ಪುಟ್ಟ ಕೊಳಲು ಕಂಬಳಿ
ಕಟ್ಟಿ ಬುತ್ತಿ ಕೈಯಲಿ ಕೋಲು
ದಿಟ್ಟ ಚೆಲುವನಾದ ಪುರಂದರ
ವಿಠಲ ಗೋವಳರ ರಾಯ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಗೊಲ್ಲ ಬಾಲಕರು ಎಳೆಯ ಕೃಷ್ಣನನ್ನು ಆಡಲು ಕರೆಯುವ ಹಾಡಿದು.

**ಅಣ್ಣೆ ಕಲ್ಲು** = ದುಂಡು ಹರಳು

**ಕೋಲು** = (ಚಿಣಿ) ಫಣಿ

**ಬಣ್ಣದಾಟ** = ಚಿತ್ರ ವಿಚಿತ್ರವಾದ ಆಟಗಳು

**Classification:** Keerthane
**Ankita:** Purandara Vittala
**Location:** NA
**Category:** Krishna Leele
**Group Words:** Krishna, ATa, ADu, kannu, kolalu, butti, govu
**Pravachana:** NA
**Explanation:** NA